ನೀವು ದಾನವರ ಮೇಲೆ ವಿಜಯ ಪಡೆದುದೂ ಅವನ ಪ್ರಭಾವದಿಂದಲೇ" ಎಂದು ಸ್ಪಷ್ಟಪಡಿಸಿದಳು. ಈ ಪ್ರಕಾರ ದೇವತೆಗಳ ಅಹಂಕಾರ ಅಡಗಿತು. ಇಲ್ಲಿ 'ಉಮೆ' ಎಂದರೆ 'ಅಧ್ಯಾತ್ಮವಿದ್ಯೆಯ ಪ್ರತೀಕ'ವೆಂದೇ ಶ್ರೀಶಂಕರಾಚಾರ್ಯರು ವಿವರಿಸುತ್ತಾರೆ.

ಮುಂದೆ ನಾಲ್ಕನೇ ಅಧ್ಯಾಯದಲ್ಲಿ, ಅತ್ಯಂತ ಶೋಭಾಯಮಾನವಾಗಿ ಬೆಳಗುತ್ತಿದ್ದ ಉಮಾದೇವಿ, 'ಬ್ರಹ್ಮ'ದ ಸ್ವರೂಪವನ್ನು ತಿಳಿಸುತ್ತಾಳೆ. ಬ್ರಹ್ಮದ ಮಹಿಮೆಯಿಂದಲೇ ದೇವತೆಗಳೂ ಮಹಿಮಾವಂತರಾಗಿರುವುದು. ಅವನ ಮಿಂಚಿನ ಹೊಳಪಿನಂಥ ಕುಡಿಗಣ್ಣ ನೋಟದಿಂದ ಸೃಷ್ಟಿ ಸ್ಥಿತಿ ಲಯಗಳೂ, ದೇವತೆಗಳು, ಪ್ರಕೃತಿಯ ವಿವಿಧ ಶಕ್ತಿಗಳೂ ಸೇರಿದಂತೆ ಸಕಲಜೀವರಾಶಿಗಳೂ ಉಂಟಾಗುವುವು. ಆ ಮಿಂಚಿನ ಕುಡಿನೋಟದಿಂದಲೇ ಜೀವಿಗಳಿಗೆ 'ಬ್ರಹ್ಮ'ದ ಅನುಭವವೂ ಆಗುವುದು. ಆದುದರಿಂದ ಬ್ರಹ್ಮವನ್ನು **'ತದ್ವನ'** ಎನ್ನುವರು. 'ವನನೀಯ' ಎಂದರೆ ಗೌರವಕ್ಕೆ ಅರ್ಹವಾದುದು, ಪೂಜನೀಯವಾದುದು. **ತತ್** – ಬ್ರಹ್ಮವನ್ನು **ವನ** – ಭಜಿಸಿದರೆ, ಆಶ್ರಯಿಸಿದರೆ ಉಪಾಸನೆ ಮಾಡಿದರೆ ಅದನ್ನು ಅರಿಯಬಹುದು. ಇದೇ 'ತದ್ವನ' ಶಬ್ದದ ಅರ್ಥ. ಬ್ರಹ್ಮನೇ ಎಲ್ಲದರ ಹಿನ್ನೆಲೆ, ಆಧಾರ. ಅವನೇ ಈ ಎಲ್ಲವನ್ನೂ ವ್ಯಾಪಿಸಿಕೊಂಡು ಎಲ್ಲದರ ಒಳಗೆ ಹೊರಗೆ ಇರುತ್ತಾನೆ. ಅದಲ್ಲದೆ, ಈ ಸಂಪೂರ್ಣ ಸೃಷ್ಟಿಯೂ ಅವನೇ ಆಗಿದ್ದಾನೆ, ಅದಕ್ಕೆ ಅತೀತನೂ ಆಗಿದ್ದಾನೆ. ಹೀಗೆ 'ಬ್ರಹ್ಮ'ವನ್ನು ಸರ್ವವ್ಯಾಪಿಯೆಂದು ತಿಳಿದು ಸೇವಿಸುವ ಉಪಾಸಕನು ಎಲ್ಲರ ಪ್ರೀತಿಗೆ ಪಾತ್ರನಾಗುವನು. ಅವನನ್ನು ಯಾರೂ ತಿರಸ್ಕರಿಸುವುದಿಲ್ಲ. ಆನಂದಪೂರ್ಣವಾದ ಅನಂತ ವ್ಯಕ್ತಿತ್ವಕ್ಕೆ ಆ ಸಾಧಕನು ಪಾತ್ರನಾಗುವನು.

ಹೀಗೆ ಶಿಷ್ಯನು ಕೇಳಿದ ಎಲ್ಲ ಪ್ರಶ್ನೆಗಳಿಗೆ ಗುರುವು ಉತ್ತರಿಸುವ ರೀತಿಯಲ್ಲಿ ಈ ಉಪನಿಷತ್ತು ರಚಿತವಾಗಿದೆ. ಸೃಷ್ಟಿ ಸ್ಥಿತಿ ಲಯ ಮೊದಲಾದ ಎಲ್ಲಾ ಚಟುವಟಿಕೆಗಳೂ, ಬೃಹತ್ತಾದ, ಭೂಮವಾದ, ಎಲ್ಲವನ್ನೂ ಮೀರಿದ ಯಾವುದೋ ಒಂದರ ಸಂಕಲ್ಪ ಇಚ್ಛೆ ನಿಯಮಗಳಂತೆ ನಡೆಯುತ್ತಿವೆ. ನಾವು, 'ನಮ್ಮಿಂದಲೇ ಎಲ್ಲ ಆಗುತ್ತಿರುವುದು', 'ನಾನು ಇದನ್ನು ಮಾಡಿದೆ, ಅದನ್ನು ಮಾಡಿದೆ' ಎಂದು ಭಾವಿಸಿದರೆ, ಅಂತಹ ಭ್ರಮೆ ಗರ್ವ ಅಹಂಕಾರಗಳು ಆ ಪರತತ್ತ್ವದಿಂದ ನಮ್ಮನ್ನು ದೂರಮಾಡುವುವು. ಗರ್ವವೆಂಬುದು ನಮ್ಮ ಶ್ರೇಯಸ್ಸಿಗೆ ಪ್ರತಿಬಂಧಕ. ಇದನ್ನು ಕೇನೋಪನಿಷತ್ತಿನಲ್ಲಿ ಬರುವ ಯಕ್ಷರೂಪಕ ತಿಳಿಸಿಕೊಡುತ್ತದೆ. ಮತ್ತು ಈ ಗರ್ವ ಅಭಿಮಾನ ಅಹಂಕಾರಗಳ ನೆಲೆಯನ್ನು ಮೀರಿ ಬೆಳೆಯಬೇಕಾದರೆ, 'ತದ್ವನ' ಉಪಾಸನಾಕ್ರಮವನ್ನು ಆಶ್ರಯಿಸಬೇಕು. ತಪ ದಮ ಉತ್ತಮಕರ್ಮಗಳ ಅನುಷ್ಠಾನದ ಮೂಲಕ, ಆ ಬ್ರಹ್ಮತತ್ತ್ವವನ್ನೇ ಪರಿಪೂರ್ಣವಾಗಿ ಸಕಲವಿಧದಿಂದಲೂ ಆಶ್ರಯಿಸಿ ಪ್ರಾರ್ಥಿಸಬೇಕು. ಆಗ ಅಂತಹ ಸಾಧಕ ವ್ಯಕ್ತಿ 'ಪರಿಪೂರ್ಣತೆ'ಯೇ ಮೂರ್ತಿವೆತ್ತಂತೆ ಆಗುತ್ತಾನೆ. ಹೀಗೆ ಕೇನ ಉಪನಿಷತ್ತು ಬೋಧಿಸುತ್ತದೆ. ಈ ಉಪನಿಷತ್ತಿನ ಸಂದೇಶದ ಮಹತ್ವವನ್ನು ಪರಮಪೂಜ್ಯ ಸ್ವಾಮಿ ರಂಗನಾಥಾನಂದಜಿ ಅವರ ಈ ಮಾತುಗಳು ಚೆನ್ನಾಗಿ ಬಿಂಬಿಸುತ್ತವೆ: **"ಸೀಮಿತತೆ ಮತ್ತು ಅಲ್ಪತೆಗಳ ಜಾಲದಲ್ಲಿ ಸಿಕ್ಕಿದ್ದರೂ ಅನಂತತೆ ಮತ್ತು ಸಾರ್ವತ್ರಿಕತೆಗಳಿಗಾಗಿ ಪ್ರಾಮಾಣಿಕವಾಗಿ ಹಂಬಲಿಸುತ್ತಿರುವ ಆಧುನಿಕ ಮಾನವನಿಗೆ, ಇದಕ್ಕಿಂತ ಹೆಚ್ಚು ಆಶಾದಾಯಕವಾದ ಸಂದೇಶವು ಮತ್ತೊಂದಿಲ್ಲ."** ⌘

## ಬದುಕಿಗೊಂದು ಬೆಳಕು

### ಪ್ರಾಮಾಣಿಕತೆಯ ಮಹತ್ವ

ಒಂದು ಊರಾಚೆ ಗೋಮಾಳದಲ್ಲಿ ಒಬ್ಬ ಕುರಿ ಕಾಯುವ ಬಾಲಕ ತನ್ನ ಕುರಿಮಂದೆಯನ್ನು ಕಾಯುತ್ತ ಇದ್ದ. ಆ ದಾರಿಯಲ್ಲಿ ಒಬ್ಬ ಸಂತರು ಹಾದುಹೋಗುತ್ತಿದ್ದರು. ಕುರಿಮಂದೆಯನ್ನು ಕಂಡು, "ನನಗೊಂದು ಕುರಿ ಬೇಕಾಗಿದೆ, ಮಾರುತ್ತೀಯಾ?" ಎಂದು ಕೇಳಿದರು. "ಇದು ನನ್ನದಲ್ಲ, ಇದರ ಮಾಲೀಕರು ಬೇರೆ. ಅವರಿಲ್ಲದೆ ಹೇಗೆ ಮಾರುವುದಕ್ಕಾಗುತ್ತದೆ?" ಎಂದು ಮರುಪ್ರಶ್ನೆ ಹಾಕಿದ ಆ ಬಾಲಕ.

**ಸಂತರು:** "ಒಳ್ಳೆಯದೇ ಆಯಿತು, ಒಂದು ಕುರಿಯನ್ನು ನನಗೆ ಮಾರಿಬಿಡು. ಮಾಲೀಕ ಕೇಳಿದರೆ, ತೋಳ ಬಂದು ತಿಂದುಬಿಟ್ಟಿತೆಂದು ಹೇಳಿದರಾಯಿತು."

ಸಂತರ ಮಾತನ್ನು ಕೇಳಿ ಆ ಬಾಲಕ ಹೀಗೆ ಹೇಳುತ್ತಾನೆ: "ಸ್ವಾಮಿ, ಕುರಿಗಳ ಯಜಮಾನ ಇಲ್ಲಿ ಇಲ್ಲದಿದ್ದರೇನಂತೆ, ಭಗವಂತ ಎಲ್ಲೆಲ್ಲೂ ಇದ್ದಾನೆಂದು ನೀವೂ ನಂಬುತ್ತೀರಲ್ಲವೆ? ನನ್ನ ಕೆಟ್ಟ ಕೆಲಸ ಭಗವಂತನ ದೃಷ್ಟಿಗೆ ಬೀಳದೆ? ಅವನ ಕಣ್ಣಿಗೆ ಮಣ್ಣೆರಚಲು ಯಾರಿಗೂ ಸಾಧ್ಯವಿಲ್ಲ. ಕ್ಷಮಿಸಿ, ತಮ್ಮಂತಹವರಿಂದ ಇಂತಹ ಸಲಹೆ ಬರಬಾರದು. ದಯವಿಟ್ಟು ಇನ್ನುಮುಂದೆ ಯಾರಿಗೂ ಇಂತಹ ಕೆಲಸವನ್ನು ಮಾಡಲು ಹೇಳಬೇಡಿ."

ಸಂತರಿಗೆ ಬಾಲಕನ ಮಾತಿನಿಂದ ಬಹಳ ಸಂತೋಷವಾಯಿತು. " ಮಗೂ, ನಿನ್ನನ್ನು ನಾನು ಪರೀಕ್ಷಿಸಬೇಕೆಂದು ಆ ರೀತಿ ಹೇಳಿದೆ, ಅಷ್ಟೆ. ನೀನು ಪ್ರಾಮಾಣಿಕನಾಗಿದ್ದೀಯೆ. ಭಗವಂತನು ನಿನ್ನಂತಹವರನ್ನೇ ಪ್ರೀತಿಸುವುದು" ಎಂದು ಹೇಳುತ್ತ, ಜೊತೆಗೇ ಅವನ ಯಜಮಾನನ ಮನೆಗೆ ಹೋದರು. ಯಜಮಾನನು ಕೇಳಿದ ಹಣವನ್ನು ಕೊಟ್ಟು, ಆ ಬಾಲಕನನ್ನು ಜೀತದಿಂದ ಮುಕ್ತನನ್ನಾಗಿ ಮಾಡಿದರು. ಅನಂತರ ಆ ಸಂತರು ಹೇಳುತ್ತಾರೆ: "ಈಗ ನಾನು ನಿನ್ನನ್ನು ಬಂಧನದಿಂದ ಹೇಗೆ ಬಿಡಿಸಿದೆನೋ, ಹಾಗೆಯೇ, ಪ್ರಾಮಾಣಿಕವಾಗಿ ಬದುಕು ನಡೆಸಿದವರನ್ನು ಭಗವಂತನು ಭವಬಂಧನದಿಂದ ಖಂಡಿತವಾಗಿಯೂ ಮುಕ್ತರನ್ನಾಗಿ ಮಾಡುತ್ತಾನೆ." (**ಹಿಂದಿ ಮೂಲ:** *ಶರತ್‌ಚಂದ್ರ ಪೆಂಡಾರ್‌ಕರ್*, **ಅನುವಾದ:** *ಸಿ.ಎಸ್. ಮಂಗಳಮ್ಮ*)

# ರಾಮಕೃಷ್ಣ–ವಿವೇಕಾನಂದರನ್ನು ಮೆಚ್ಚಿದ ವಿಖ್ಯಾತ ವಿಜ್ಞಾನಿಗಳು

ಡಾ. ಎನ್. ಬಿ. ದೇಸಾಯಿ



**ಶ್ರೀರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರು ಇಡೀ ಜಗತ್ತಿನ ಚಿಂತನಧಾರೆಗೆ ಅಪೂರ್ವ ಕೊಡುಗೆಯನ್ನು ನೀಡಿದವರು. ಹೀಗಾಗಿ ಅವರ ಜೀವನ ಮತ್ತು ಬೋಧನೆಗಳು ಪ್ರಪಂಚದಾದ್ಯಂತ ಶ್ರೇಷ್ಠ ವಿಜ್ಞಾನಿಗಳ ಗಮನವನ್ನು ಸೆಳೆದಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಅಂತಹ ಕೆಲವು ನಿದರ್ಶನಗಳನ್ನು ವಿವರಿಸಿರುವ ಲೇಖಕರು ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನಲ್ಲಿ ಭೌತಶಾಸ್ತ್ರದ ಪ್ರಾಧ್ಯಾಪಕರಾಗಿದ್ದಾರೆ. ಇವರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು.**

### ಪೀಠಿಕೆ

ಖ್ಯಾತ ವಿಜ್ಞಾನಿಗಳು ತಮ್ಮ ಕ್ಷೇತ್ರದ ಹೊರತಾಗಿ ನೈತಿಕತೆ, ತತ್ತ್ವಜ್ಞಾನಗಳಲ್ಲಿಯೂ ಪರಿಣತಿಯನ್ನು ಹೊಂದಿರುತ್ತಾರೆ. ಇದಕ್ಕೆ ಈ ಲೇಖನದಲ್ಲಿರುವ ಎಂಟು ಜನ ವಿಜ್ಞಾನಿಗಳೇ ಸಾಕ್ಷಿ. ಅವರಲ್ಲಿ ನಾಲ್ವರು ಭಾರತೀಯರು ಮತ್ತು ನಾಲ್ವರು ವಿದೇಶೀಯರು. ಇವರೆಲ್ಲ ಸ್ವಾಮಿ ವಿವೇಕಾನಂದರ ಲೇಖನಗಳ ಅಧ್ಯಯನದಿಂದ ಪ್ರಭಾವಿತರಾಗಿ ಜನಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಹಾಗೆಯೇ, ಸರಳ ಬಾಳ್ವೆ ಹಾಗೂ ಶ್ರೇಷ್ಠ ವಿಚಾರಧಾರೆಯಿಂದ ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಂಡವರು. ವಿಶ್ವವಿಖ್ಯಾತರಾದ ಸ್ವಾಮೀಜಿಯವರ ವ್ಯಕ್ತಿತ್ವವನ್ನು ಅರಿಯಲು ಈ ವಿಜ್ಞಾನಿಗಳ ಹೇಳಿಕೆಗಳು ನಮಗೆ ಒಂದು ಆಕರ. ಸ್ವಾಮಿ ವಿವೇಕಾನಂದರ ೧೫೦ನೇ ಜಯಂತಿಯ ಸಂದರ್ಭದಲ್ಲಿ ಈ ಲೇಖನ ಪ್ರಸ್ತುತವೆನಿಸುತ್ತದೆ.

**ಫೆಲಿಕ್ಸ್ ಮಾರ್ಟಿ ಇಬನೇಜ್ (Felix Marti-Ibanez) :** ೧೯೩೯ರಲ್ಲಿ ಸ್ಪೇನ್ ದೇಶದಲ್ಲಿ ಅರಾಜಕತೆ ತಾಂಡವವಾಡುತ್ತಿತ್ತು.



ಆಗ ಫೆಲಿಕ್ಸ್ ಮಾರ್ಟಿ ಇಬನೇಜ್ ಎಂಬ ವಿಜ್ಞಾನಿಯು ಆ ದೇಶದಿಂದ ಹೊರಟು ಹೋಗಬೇಕಾಯಿತು. ಆಗ ಅವರು ತಮ್ಮ ಮನೆಯ ಗ್ರಂಥ ಭಂಡಾರದಿಂದ ತೆಗೆದುಕೊಂಡು ಹೋದ ತಮ್ಮ ಅತ್ಯಂತ ಪ್ರೀತಿಯ ಪುಸ್ತಕ ಯಾವುದು ಗೊತ್ತೆ? ಫ್ರೆಂಚ್ ಸಾಹಿತಿ ರೊಮರೋಲಾ ಬರೆದ ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆ (*The Universal Gospel and the Life of Swami Vivekananda* by Romain Rolland). ಈ ಪುಸ್ತಕವು ಜೀವನಪರ್ಯಂತ ಜನರ ಸೇವೆಯನ್ನು ಮಾಡುವಂತೆ ಈ ವಿಜ್ಞಾನಿಯನ್ನು ತುಂಬಾ ಪ್ರೋತ್ಸಾಹಿಸಿತು. ಇವರು ವೈದ್ಯಕೀಯ ವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದರು; ೧೯೩೧ ರಿಂದ ೧೯೩೯ ರವರೆಗೆ ವೈದ್ಯಕೀಯ ಮನೋವಿಜ್ಞಾನವನ್ನು ಅಭ್ಯಾಸ ಮಾಡಿದರು. ಜಿನೀವಾ, ನ್ಯೂಯಾರ್ಕ್ ಮತ್ತು ಮೆಕ್ಸಿಕೋ ಪಟ್ಟಣಗಳಲ್ಲಿ ನಡೆದ World Peace Congress ಸಭೆಗಳಲ್ಲಿ, ಸ್ಪೇನ್ ದೇಶದ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಇವರು ಬರೆದ ವೈದ್ಯಕೀಯ ಶಾಸ್ತ್ರದ ಪುಸ್ತಕಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿ ಪಡೆದಿವೆ.

**ಮೈಕೇಲ್ ಟಾಲ್‌ಬಾಟ್ (Michael Talbot) :** ಇವರೊಬ್ಬ ಶ್ರೇಷ್ಠ ಬರಹಗಾರರು; ಅನೇಕ ಪುಸ್ತಕಗಳನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಕಟಿಸಿದ್ದಾರೆ. ಅವು ಪ್ರಾಚೀನ ತತ್ತ್ವಶಾಸ್ತ್ರ ಮತ್ತು ಕ್ವಾಂಟಮ್ ಭೌತಶಾಸ್ತ್ರಗಳ ನಡುವಣ ಸಾಮರಸ್ಯವನ್ನು ಪ್ರತಿಪಾದಿಸುತ್ತವೆ. ನಮಗೆ ತೋರುವ ಜಗತ್ತು ಒಂದು ಬಗೆಯ ಬೃಹತ್ ಹೋಲೋಗ್ರಾಮಿನ ರೀತಿ ಇದೆಯೆಂದು ಮೈಕೇಲ್ ಟಾಲ್‌ಬಾಟ್ ಅವರ ಒಂದು ಸಿದ್ಧಾಂತ ಹೇಳುತ್ತದೆ. ಅವರು ೧೯೫೩ರಿಂದ ೧೯೯೨ ರವರೆಗೆ ಜೀವಿಸಿದ್ದರು.



ಇವರ ಪ್ರಕಾರ ಪೌರಸ್ತ್ಯ ದೇಶಗಳ ಪ್ರಾಚೀನ ತತ್ತ್ವಜ್ಞಾನದ

ಮತ್ತು ಇತ್ತೀಚೆಗೆ ಹೊರಬರುತ್ತಿರುವ ಪಾಶ್ಚಾತ್ಯ ದೇಶಗಳ ವೈಜ್ಞಾನಿಕ ಸಿದ್ಧಾಂತಗಳ ನಡುವೆ ತುಂಬಾ ಸಾಮ್ಯತೆ ಇರುವುದು ಕಂಡುಬರುತ್ತದೆ. ಆಧುನಿಕ ಭೌತಶಾಸ್ತ್ರಜ್ಞರು ಮತ್ತು ಪ್ರಾಚೀನ ಮಂತ್ರದ್ರಷ್ಟಾರರ ನಡುವಿನ ಈ ಸಮಾನತೆ ಬಹಳ ವಿಶಿಷ್ಟ ವಾದುದು. ESLON ಎಂಬ ಸಂಸ್ಥೆಯಲ್ಲಿ ಮನಶ್ಶಾಸ್ತ್ರಜ್ಞರಾದ ಲಾರೆನ್ಸ್ ಲೇಶನ್ ಎಂಬುವವರು ಇದಕ್ಕೆ ಒಂದು ಉದಾ ಹರಣೆ ಕೊಡುತ್ತಾರೆ. ಈ ಜಗತ್ತಿನ ಪ್ರತಿಯೊಂದು ವಸ್ತುವೂ, ಪಾರಮಾರ್ಥಿಕವಾಗಿ ನೋಡಿದಾಗ ನಿರಪೇಕ್ಷವೇ ಆಗಿದೆ. ಆ ನಿರಪೇಕ್ಷ ವಸ್ತುವೇ ದೇಶ, ಕಾಲ, ಕಾರಣಗಳೊಂದಿಗೆ ಕೂಡಿಕೊಂಡು, ನಮಗೆ ಗೋಚರಿಸುವ ವಿಶ್ವವಾಗಿ ಕಾಣುತ್ತಿರು ವುದು. ಈ ವಿಚಾರಧಾರೆಯನ್ನು ಯೂರೋಪಿನಲ್ಲಿ ಪ್ರಸಿದ್ಧಪಡಿಸಿ ದವರು ಮಿನ್ಕೋವಸ್ಕಿ ಎಂಬ ಭೌತವಿಜ್ಞಾನಿ. ಸುಪ್ರಸಿದ್ಧ ವಿಜ್ಞಾನಿಯಾದ ಆಲ್ಬರ್ಟ್ ಐನ್‌ಸ್ಟೈನ್ ಬಳಿ ಇವರು ಗಣಿತಶಾಸ್ತ್ರ ವನ್ನು ಅಧ್ಯಯನ ಮಾಡಿದ್ದರು. ಈ ವಿಚಾರಧಾರೆಯ ಮೇಲೆ ಐನ್‌ಸ್ಟೈನರ ಸಾಪೇಕ್ಷ ಸಿದ್ಧಾಂತದ ಪ್ರಭಾವ ಇರುವುದು ಸ್ಪಷ್ಟ ವಾಗಿ ಕಂಡುಬರುತ್ತದೆ. ಇದು ೨೦ನೇ ಶತಮಾನದ ಆರಂಭ ಕಾಲದ ಬೆಳವಣಿಗೆ.

ವಿಶೇಷವೆಂದರೆ, ಸ್ವಾಮಿ ವಿವೇಕಾನಂದರ 'ಜ್ಞಾನಯೋಗ' ಗ್ರಂಥದಲ್ಲಿಯೂ ಈ ವಿಚಾರಧಾರೆಯನ್ನು ಗುರುತಿಸಬಹುದು. ಸ್ವಾಮೀಜಿ ೧೯ನೆಯ ಶತಮಾನದ ಅಂತಿಮ ಘಟ್ಟದಲ್ಲಿಯೇ ಇಂಥದೊಂದು ತೀರ್ಮಾನಕ್ಕೆ ವೈಜ್ಞಾನಿಕ ಚಿಂತನೆಯ ಮೂಲಕ ತಲುಪಿದ್ದರು. ಹಾಗೂ ಅಮೆರಿಕ ಮುಂತಾದ ಕಡೆಗಳಲ್ಲಿ ಮಾಡಿದ ತಮ್ಮ ಪ್ರವಚನಗಳಲ್ಲಿ ಇದನ್ನು ವ್ಯಕ್ತಪಡಿಸಿಯೂ ಇದ್ದರು. ನಿರಪೇಕ್ಷ ತತ್ತ್ವವೆನ್ನುವುದು ಮೂಲತಃ ಅದ್ವೈತ ಭಾವನೆ. ಸ್ವಾಮಿ ವಿವೇಕಾನಂದರ ಮತ್ತು ಮಿನ್ಕೋವಸ್ಕಿಯ ವಿಚಾರಧಾರೆಗಳೇ ಮುಂದೆ ಕ್ವಾಂಟಮ್ ಭೌತಶಾಸ್ತ್ರದ ಆಧಾರ ಸ್ತಂಭಗಳಾದವು ಎಂದು ಮೈಕೇಲ್ ಟಾಲ್‌ಬಾಟ್ ಘೋಷಿಸಿದರು.

**ಲಕ್ಷ್ಮಣಸ್ವಾಮಿ ಮೊದಲಿಯಾರ್ :** ಇವರು ೧೯೪೦ರ ದಶಕದಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದರು. ಇವರೊಬ್ಬ ಖ್ಯಾತ ಭೌತಶಾಸ್ತ್ರಜ್ಞರು, ದಕ್ಷ ಆಡಳಿತಗಾರರು ಮತ್ತು ಶಿಕ್ಷಣತಜ್ಞರು. ಇವರು ಸಾಕಷ್ಟು ಉನ್ನತ ಪದವಿಗಳನ್ನು ಪಡೆದುಕೊಂಡಿದ್ದರು; WHO, UNESCO ಇತ್ಯಾದಿ ಪ್ರತಿಷ್ಠಿತ ಸಂಸ್ಥೆಗಳ ಸದಸ್ಯರಾಗಿದ್ದರು. ೧೯೬೪ರಲ್ಲಿ ಇವರಿಗೆ 'ಪದ್ಮ ವಿಭೂಷಣ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸ್ವಾಮಿ ವಿವೇಕಾನಂದರ ಬೋಧನೆ ಗಳಿಂದ ಲಕ್ಷ್ಮಣಸ್ವಾಮಿ ಮೊದಲಿಯಾರ್ ತುಂಬಾ ಪ್ರಭಾವಿತರಾಗಿದ್ದರು. ಸ್ವಾಮೀಜಿ



ಯವರಿಗೆ ಸಂಸ್ಕೃತ ಭಾಷೆಯಲ್ಲಿದ್ದ ಪ್ರಭುತ್ವವನ್ನು ಕಂಡು ಇವರು ಬಹಳಷ್ಟು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಚೆನ್ನೈ ಪಟ್ಟಣದ ಅನೇಕ ಸಂಸ್ಕೃತ ಪಂಡಿತರು ಸ್ವಾಮೀಜಿಯವರ ಜ್ಞಾನ ಭಂಡಾರವನ್ನು ಕಂಡು ಅಚ್ಚರಿ ವ್ಯಕ್ತಪಡಿಸಿದರು. ಇದನ್ನು ಸ್ವತಃ ಮೊದಲಿಯಾರ್ ಅವರೇ ತಮ್ಮ ಪತ್ರಗಳಲ್ಲಿ ತಿಳಿಸಿದ್ದಾರೆ.

**ಸತ್ಯೇಂದ್ರನಾಥ ಬೋಸ್:** ಇವರು ವಿಶ್ವವಿಖ್ಯಾತಿ ಪಡೆದ ಭಾರತೀಯ ಭೌತವಿಜ್ಞಾನಿ; ಕೊಲ್ಕತಾ ವಿಶ್ವವಿದ್ಯಾನಿಲಯದಲ್ಲಿ ಭೌತಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಮೂಲಭೂತ ಭೌತಕಣ ಗಳಲ್ಲಿ ಒಂದನ್ನು ಅವರ ಹೆಸರಿನಲ್ಲೇ Boson Particle ಎಂದು ಕರೆಯಲಾಗಿದೆ. ಹಾಗೆಯೇ ಅವರ ಒಂದು ಸಿದ್ಧಾಂತ ಕೂಡ Bose Einstein Statistics ಎಂದು ಪ್ರಸಿದ್ಧ ವಾಗಿದೆ. ಇದನ್ನು ಕಾಲೇಜು ಮಟ್ಟದಲ್ಲಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಾರೆ. ಹಾಗೆಯೇ ಇತ್ತೀಚಿನ ದಿನಗಳಲ್ಲಿ ಇದನ್ನು ತಂತ್ರಜ್ಞಾನದಲ್ಲೂ ಕೂಡ ಅಳವಡಿಸಿಕೊಳ್ಳುತ್ತಿದ್ದಾರೆ.



ಇಂತಹ ಮಹಾನ್ ವಿಜ್ಞಾನಿ ಸ್ವಾಮಿ ವಿವೇಕಾನಂದರ ಬಗ್ಗೆ ಹೇಳುವುದು ಹೀಗೆ:

"ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನಗಳಲ್ಲಿ ಭಾರತೀಯರು ಅಜ್ಞಾನದ ನಿದ್ರೆಯಲ್ಲಿದ್ದರು. ಅವರನ್ನು ಸ್ವಾಮಿ ವಿವೇಕಾನಂದರು ಬಡಿದೆಬ್ಬಿಸಿದರು. ಯಾರ್‍ಯಾರು ಸ್ವಾಮೀಜಿಯವರ ಸಂಪರ್ಕಕ್ಕೆ ಬಂದಿದ್ದಾರೋ, ಅವರೆಲ್ಲರೂ ಅವರ ಅಗಾಧ ಪ್ರಭಾವಕ್ಕೆ ಒಳಗಾಗಿದ್ದಾರೆ. ಏಕೆಂದರೆ ಸ್ವಾಮೀಜಿಯವರಲ್ಲಿ ಹುದುಗಿದ್ದ ಶಕ್ತಿ ಅಪಾರವಾದುದು. ಅವರು ತಮ್ಮ ಈ ಆಂತರಿಕ ಶಕ್ತಿಯ ಸಹಾಯದಿಂದ ದೇಶವಿದೇಶಗಳಲ್ಲಿ ಸಂಚಾರ ಮಾಡಿ, ಅಲ್ಲೆಲ್ಲ ಶ್ರೀರಾಮಕೃಷ್ಣರ ದಿವ್ಯಸಂದೇಶವನ್ನು ಪ್ರಚಾರ ಮಾಡಿದರು. ಆ ಮೂಲಕ ವಿವಿಧ ಧರ್ಮಗಳ ಅನುಯಾಯಿಗಳ ನಡುವೆ ಇದ್ದ ವೈಷಮ್ಯವನ್ನು ನಿವಾರಿಸಲು ಪ್ರಯತ್ನಪಟ್ಟರು. ಹಿಂದಿನ ಕಾಲದಲ್ಲಿ ಶ್ರೀಶಂಕರಾಚಾರ್ಯರು ಮಾಡಿದ ಘನಕಾರ್ಯವನ್ನೇ ೧೯ನೆಯ ಶತಮಾನದಲ್ಲಿ ಸ್ವಾಮೀಜಿಯವರು ಸಾಧಿಸಿ ತೋರಿಸಿ ದರು. ಇದಲ್ಲದೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸರ್ವಧರ್ಮಸಮನ್ವಯ ಭಾವವನ್ನೂ ಬೋಧಿಸಿದರು."

**ಜಾರ್ಜ್ ವಿಲಿಯಮ್ಸ್:** ಅಮೆರಿಕಾದ ಒಬ್ಬ ವಿಖ್ಯಾತ ಜೀವ ಶಾಸ್ತ್ರಜ್ಞರಾದ ಇವರು Adaptation and Natural Selection ಎಂಬ ಸುಪ್ರಸಿದ್ಧ ಗ್ರಂಥದ ಲೇಖಕರು. ಅವರ ಜೀವಿತಕಾಲ ೧೯೨೬ ರಿಂದ ೨೦೧೦. ಅವರು ಶ್ರೀರಾಮಕೃಷ್ಣರ ಬಗ್ಗೆ ಹೀಗೆ ಅಭಿಪ್ರಾಯಪಡುತ್ತಾರೆ: "ಭಾರತೀಯ ತತ್ತ್ವಜ್ಞಾನ ಮತ್ತು ವೇದಾಂತಗಳು ಶ್ರೀರಾಮಕೃಷ್ಣರಲ್ಲಿ ಪರಿಶುದ್ಧವಾಗಿ ಒಡಮೂಡಿರು